# ರಮಾಗೋವಿಂದ ಪುರಸ್ಕಾರ

## ಡಾ.ಕೆ.ಆರ್.ಕಾಮತ್, ಓಂಕಾರ್‌ನಾಥ್ ಶರ್ಮ, ಸಿ.ಆರ್. ಹಿಮಾಂಶುಗೆ ಪ್ರಶಸ್ತಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ನಗರದ ಡಿ.ರಮಾಬಾಯಿ ಚಾರಿಟಬಲ್ ಫೌಂಡೇಷನ್, ಎಂ.ಗೋಪಿನಾಥ ಶೆಣೈ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೂವರು ಸಾಧಕರು ಹಾಗೂ ಎರಡು ಸಂಸ್ಥೆಗೆ ಕಲಾಮಂದಿರದಲ್ಲಿ ಭಾನುವಾರ ರಮಾಗೋವಿಂದ ಪುರಸ್ಕಾರ ಪ್ರದಾನ ಮಾಡಲಾಯಿತು.

» ಜ್ಞಾನಸಿಂಧು ವಸತಿ ಶಾಲೆ, ಇಡಗುಂಜಿ ಯಕ್ಷಗಾನ ಮೇಳ ಸಂಸ್ಥೆಗೂ ಒಲಿದ ಗೌರವ

ಜನರಿಂದ ಬಳಸದ ಔಷಧಗಳನ್ನು ಸಂಗ್ರಹಿಸಿ ಬಡವರಿಗೆ ನೀಡುವ ಮೆಡಿಸಿನ್ ಬಾಬಾ ಎಂದೇ ಖ್ಯಾತರಾದ ಗ್ರೇಟರ್ ನೋಯ್ಡಾದ ಬ್ಲಡ್ ಬ್ಯಾಂಕ್‌ನಲ್ಲಿ ತಂತ್ರಜ್ಞರಾಗಿ ಕಾರ್ಯನಿರ್ವಹಿಸಿ ನಿವೃತ್ತರಾದ ಓಂಕಾರ್‌ನಾಥ್ ಶರ್ಮ, ನಗರದಲ್ಲಿ ಕಳೆದ 51 ವರ್ಷಗಳಿಂದ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಡಾ.ಕೆ.ಆರ್.ಕಾಮತ್, ಒಂಟಿಕೊಪ್ಪಲು 8ನೇ ಕ್ರಾಸ್ ಗಣಪತಿ ಸಂಗೀತೋತ್ಸವದ ಮುಖ್ಯ ಪ್ರವರ್ತಕ ಸಿ.ಆರ್. ಹಿಮಾಂಶು ಹಾಗೂ ಹೊಳೆಆಲೂರಿನ ಅಂಧರ ಜ್ಞಾನಸಿಂಧು ವಸತಿ ಶಾಲೆ ಹಾಗೂ ಇಡಗುಂಜಿ ಯಕ್ಷಗಾನ ಮೇಳ ಸಂಸ್ಥೆಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಂಧರ ಶಾಲೆಯ ಪರವಾಗಿ ಸಂಸ್ಥಾಪಕರಾದ ಶಿವಾನಂದ ಕೇಲೂರ ಹಾಗೂ ಅವರ ತಾಯಿ ತುಳಸಮ್ಮ, ಇಡಗುಂಜಿ ಯಕ್ಷಗಾನ ಮೇಳದ ಪರವಾಗಿ ಸಂಸ್ಥೆಯ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ ಪ್ರಶಸ್ತಿ ಸ್ವೀಕರಿಸಿದರು. ಸಂಸ್ಥೆಗೆ ತಲಾ 5 ಲಕ್ಷ ರೂ. ನಗದು, ಪ್ರಶಸ್ತಿ ಫಲಕ, ವೈಯಕ್ತಿಕ ಪ್ರಶಸ್ತಿಗೆ ಆಯ್ಕೆಗೊಂಡವರಿಗೆ 3 ಲಕ್ಷ ರೂ. ನಗದು, ಪ್ರಶಸ್ತಿ ಫಲಕ ಪ್ರದಾನ ಮಾಡಲಾಯಿತು.

ಜ್ಞಾನಸಿಂಧು ವಸತಿ ಶಾಲೆಯ ಸಂಸ್ಥಾಪಕ ಶಿವಾನಂದ ಕೇಲೂರ ಮಾತನಾಡಿ, ಸಾಮಾನ್ಯವಾಗಿ ಹಳ್ಳಿಯಲ್ಲಿರುವ ಜನರನ್ನು ನಗರ ಪ್ರದೇಶದವರು ಗುರುತಿಸುವುದಿಲ್ಲ ಎಂಬ ಭಾವನೆ ಇತ್ತು. ಆದರೆ, ನಮ್ಮ ಸೇವೆಯನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಿರುವುದನ್ನು ಗಮನಿಸಿದಾಗ ನಮ್ಮನ್ನು ಪ್ರತಿಯೊಬ್ಬರೂ ಗಮನಿಸುತ್ತಾರೆ ಎಂಬ ಭಾವನೆ ಮೂಡಿದೆ. ನಮಗೆ ದೊರೆತಿರುವ 5 ಲಕ್ಷ ರೂ. ಪ್ರಶಸ್ತಿ ಮೊತ್ತವನ್ನು ಅಂಧ ವಿದ್ಯಾರ್ಥಿಗಳ ಕಲ್ಯಾಣಕ್ಕೆ ಮುಡಿಪಾಗಿಡಲಾಗುವುದು ಎಂದರು.

ವೇದಿಕೆಯಲ್ಲಿ ಡಿ.ರಮಾಬಾಯಿ ಚಾರಿಟಬಲ್ ಫೌಂಡೇಷನ್, ಎಂ. ಗೋಪಿನಾಥ ಶೆಣೈ ಚಾರಿಟಬಲ್ ಟ್ರಸ್ಟ್ ಪದಾಧಿಕಾರಿಗಳಾದ ಎಂ. ರಮನಾಥ ಶೆಣೈ, ಎಂ. ಜಗನ್ನಾಥ ಶೆಣೈ, ಎಂ. ಗೋಪಿನಾಥ ಶೆಣೈ, ಇತರರು ಇದ್ದರು.



ವಿಜಯವಾಣಿ ಚಿತ್ರ

ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಓಂಕಾರ್‌ನಾಥ್ ಶರ್ಮ, ಡಾ.ಕೆ.ಆರ್. ಕಾಮತ್, ಸಿ.ಆರ್. ಹಿಮಾಂಶು, ಶಿವಾನಂದ ಕೇಲೂರ, ತುಳಸಮ್ಮ, ಕೆರೆಮನೆ ಶಿವಾನಂದ ಹೆಗಡೆ ಅವರಿಗೆ ರಮಾಗೋವಿಂದ ಪುರಸ್ಕಾರ ಪ್ರದಾನ ಮಾಡಲಾಯಿತು. ವಿದ್ಯಾಭೂಷಣ, ಎಂ. ರಮನಾಥ ಶೆಣೈ, ಎಂ. ಜಗನ್ನಾಥ ಶೆಣೈ, ಎಂ. ಗೋಪಿನಾಥ ಶೆಣೈ ಇತರರು ಇದ್ದರು.

### ಅಂತರಂಗ ಶುದ್ಧಿಗೆ ದಾನ ಮಾಡಿ

ಖ್ಯಾತ ಗಾಯಕ ವಿದ್ಯಾಭೂಷಣ ಮಾತನಾಡಿ, ಹುಟ್ಟು, ಬದುಕು, ಭವಿಷ್ಯದ ನಡುವೆ ನಾವು ಹೇಗೆ ಇರಬೇಕೆಂಬುದು ಮುಖ್ಯ. ನನ್ನಲ್ಲಿ ಸಂಪತ್ತು ಇದೆ ಎಂಬ ಅಹಂ ಜನರಿಗೆ ಬರಬಾರದು. ಇರುವ ಸಂಪತ್ತನ್ನು ಅರ್ಹರಿಗೆ, ಬಡವರಿಗೆ ದಾನ ಮಾಡಬೇಕು. ಅದರಲ್ಲಿ ಒಂದು ಸಾರ್ಥಕತೆ ಇದೆ ಎಂದರು.ದಾನ ಹೇಗೆ ಮಾಡಬೇಕೆಂದು ಉಪನಿಷತ್‌ನಲ್ಲಿ ಉಲ್ಲೇಖವಿದೆ. ಪ್ರತಿಯೊಬ್ಬರೂ ಆತ್ಮಪೂರ್ವಕವಾಗಿ ದಾನ ಮಾಡಬೇಕು. ಇಲ್ಲವಾದಲ್ಲಿ ಸಂಪತ್ತು ಇಂದಲ್ಲ ನಾಳೆ ನಾಶವಾಗಿ ಹೋಗುತ್ತದೆ ಎಂಬ ಭಯದಲ್ಲಾದರೂ ದಾನ ಮಾಡಬೇಕು. ಮತ್ತೊಬ್ಬರು ನಮ್ಮನ್ನು ಹಂಗಿಸುತ್ತಾರೆ ಎಂಬ ನಾಚಿಕೆಯಿಂದಾದರೂ ದಾನ ಮಾಡಬೇಕು. ಇದೆಲ್ಲದಕ್ಕಿಂತ ಮುಖ್ಯವಾಗಿ ಪ್ರತಿಯೊಬ್ಬರು ತಮ್ಮ ಅಂತರಂಗದ ಶುದ್ಧಿಗಾಗಿ ದಾನ ಮಾಡಲೇ ಬೇಕು. ನಾವು ದಾನ ಮಾಡಲು ಪ್ರಾರಂಭಿಸಿದರೆ ನಮ್ಮೊಳಗಿನ ಅಹಂ ತಾನಾಗಿಯೇ ಕರಗಿ ಹೋಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸಮಾಜದಿಂದ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸಮಾಜ ಸೇವೆಯಲ್ಲಿ ತಮ್ಮನ್ನು ಅರ್ಪಿಸಿಕೊಂಡವರನ್ನು ಗುರುತಿಸಿ ಇಂದು ಪ್ರಶಸ್ತಿ ಪ್ರದಾನ ಮಾಡಿರುವುದು ಸಂತಸದ ವಿಚಾರ. ಇವರಾರು ಪ್ರಶಸ್ತಿಗಾಗಿ ಅರ್ಜಿ ಹಾಕಿದವರಲ್ಲ. ಇವರೆಲ್ಲ ವನಸುಮ ಇದ್ದಂತೆ. ಇವರು ಮಾಡಿದ ಸಾಧನೆಯ ಕಂಪು ಇಲ್ಲಿಯವರೆಗೆ ಸೂಸಿದ ಹಿನ್ನೆಲೆಯಲ್ಲಿ ಪ್ರಶಸ್ತಿ ಒಲಿದಿದೆ

| **ವಿದ್ಯಾಭೂಷಣ** ಖ್ಯಾತ ಗಾಯಕ

ಸಮಾಜ ಸೇವೆಯಲ್ಲಿ ತೊಡಗಿರುವವರನ್ನು ಗುರುತಿಸಿ ಅವರ ಸೇವೆಗೆ ಮತ್ತಷ್ಟು ಪ್ರೋತ್ಸಾಹ ನೀಡುವ ಕಾರ್ಯವನ್ನು ಡಿ.ರಮಾಬಾಯಿ ಚಾರಿಟಬಲ್ ಫೌಂಡೇಷನ್, ಎಂ. ಗೋಪಿನಾಥ ಶೆಣೈ ಚಾರಿಟಬಲ್ ಟ್ರಸ್ಟ್ ಮಾಡುತ್ತಿರುವುದು ಶ್ಲಾಘನೀಯ. ಇಂಥ ಸಂಸ್ಥೆಗಳು ದೇಶಕ್ಕೆ ಮಾದರಿ.

| **ಕೆರೆಮನೆ ಶಿವಾನಂದ ಹೆಗಡೆ** ನಿರ್ದೇಶಕ, ಇಡಗುಂಜಿ ಯಕ್ಷಗಾನ ಮೇಳ

# RamaGovinda Puraskara-2020 presentation in city on Jan.5

## Mysuru's Dr. K.R. Kamath and art patron C.R. Himamshu among awardees




*Govinda Rao* *Ramabai*



*Vidyabhushana*







*Dr. K.R. Kamath* *C.R. Himamshu* *Omkarnath Sharma* *Shivanand Kelur* *Shivananda Hegde*

Mysuru, Jan.3 (BNR) - Smt. D. Ramabai Charitable Foundation and Sri M. Gopinath Shenoy Charitable Trust, Mysuru, have chosen two institutions and three individuals including Mysuru's Dr. K.R. Kamath and art patron C.R. Himamshu for its annual RamaGovinda Puraskara-2020.

The Foundation and the Trust are associated with a pro-societal cause in education, health and cultural sectors, immensely involving human welfare and development. As an extension of their social endeavours, these two institutions have collectively instituted the 'RamaGovinda Puraskara' to be presented annually since 2016. This award is a yearly event, preceded by meticulous selection of institutions and individuals working for societal development.

This year the awards will be conferred on **Jnanasindhu Residential School for the Visually Challenged, Hole-Alur, Ron taluk, Gadag district** (Shivanand Kelur); **Idagunji Mahaganapathi Yakshagana Mandali based in Uttara Kannada district** (Keremane Shivananda Hegde); **Omkarnath Sharma** of Delhi, who is known as 'Medicine Baba'; **Dr. K.R. Kamath** of Kamakshi Hospital, Mysuru and **C.R. Himamshu**, renowned patron of art and music, who is well-known for organising 8th Cross Ganesha Music Festival in the city.

The award, comprising a citation, Rs.5 lakh cash prize for institutions and Rs.3 lakh for individuals, will be presented at a ceremony to be held at Kalamandira in city on Jan.5 at 6 pm. Vocalist Vidyabhushana will inaugurate the programme. M. Ramanatha Shenoy couple, M. Jagannath Shenoi couple and M. Gopinatha Shenoy couple will be present.

From 8 pm to 9 pm, the students of Jnanasindhu Residential School for the Visually Challenged will demonstrate Yoga and Mallakamba stunts.

**PROFILES**

**Jnanasindhu Residential School for the Visually Challenged, Hole-Alur,** that started with only five students, now caters to more than 100 visually imapaired persons from Gadag and surrounding districts. The Rajyotsava Award-winning institute was started in July 2010 by Tulasamma Kelur and her son Shivanand Kelur. The School mainly focuses on Yoga and Music along with regular classes till 9th standard. Students of this School have excelled at National-level Yoga competitions and are also well-known for breathtaking Mallakamba stunts. A total of 12 teachers are serving in the institution with most of them visually impaired.

**Sri Idagunji Mahaganapathi Yakshagana Mandali** was started in 1935 by Keremane Shivaram Hegde. It has conserved the purity of Yakshagana as an art form and has given over 9,000 performances across India and abroad in the past 84 years. In a bid to propagate this art for posterity, the Mandali is also offering a 2-year training in Yakshagana along with scholarship under Gurukula tradition since 28 years. After Shivaram Hegde, the Mandali was ably managed by Keremane Shambhu Hegde and now, the third generation's Keremane Shivananda Hegde is leading the Mandali in the right direction.

**Omkarnath Sharma**, who has retired as a technician at Kailash Hospital Blood Bank in Greater Noida of Uttar Pradesh, is known to distribute medicines free of cost to the needy. The 79-year-old Sharma, who was a witness to the death of two persons injured in Delhi Metro bridge collapse in 2008 as they could not afford the costly medicines prescribed to them, decided to visit houses door-to-door and collect medicines that were unused. He used to segregate them, make a list of the medicines, its manufacturer, expiry date and stock them to provide it to the persons in need, free of cost. Hence, he became popular as 'Medicine Baba' for his selfless and voluntary service.

The 75-year-old **Dr. K.R. Kamath** has been practising medicine as a General Practitioner in Mysuru for the last 51 years. A simple and committed doctor, he is serving as an able Administrator and Trustee of Kamakshi Hospital in city since 47 years. Patients from the neighbouring villages trust only *'Kamat Doctoru.'* For the Goud Saraswat community in Mysuru, he is endearingly known as *'Rag Maam.'*

This award is in recognition of his service and contribution to the field of medicine.

**C.R. Himamshu**, 67, a renowned patron of art and music, has been involved in organising concerts and bringing the best of talent from across India to the city since decades.

A former Syndicate Member of Karnataka State Dr.Gangubai Hangal Music and Performing Arts University, Mysuru, Himamshu is well-known among *rasikas* for hosting the Annual Heritage Music Festival with Ganeshotsava at 8th Cross Pandal in V.V. Mohalla. The 58th edition of the Fest was held in 2019 under the auspices of SPVGMC Trust of which he is the Hon. Secretary since 40 years.

# Staging of drama 'Sampoorna Ramayana' on Sunday

Mysuru, Jan. 3 - The newly created "Muktha Voddolaga Vedike" in city will be staging the drama "Sampoorna Ramayana" on Sunday (Jan.5) at Town Hall at 11 am. The following artistes will be performing respective roles: Dasharatha by Dr. N. N. Prahallada, Sri Rama by Akki Hebbal Nagaraj, Lakshmana by Shivakumar, Seethadevi by Geetha Upadhayaya, Kaikai and Maya Shoorpanike by Savithri Ganapathi, Ravana by Shivabasappa, Vibeeshana by Mallashetty, Sugreeva by Varadha Nayak, Maya Ravana by Lokesh, Jambhavantha by Siddaraju, Manthare by Jayashree Hegde, Ghora Shoorpanike by Shantha Shastry, Lankini by Sarala kumari, Jatayu by Latha Nayak, Mandodhari by Saraswathji Halasanghi, Bharatha by S.K. Nanjappa, Shathrugna and Kumbakarna by Girija Shankar, Anjanaya by H.V. Ganesh, Vasishta Maharashi and Vali by H.S. Nagesh, Anghadha and Maricha by A.B. Shivarudhraiah, Manthri Sumanthtra and Prahastha by K.Siddhachar, Suthradhari by Dr. Srinivasamurthy.

Casio by P. Lokesh, Thalavadya by Narasimhachar, Tabla by B.N. Shiva Kumar, Clarinet by C. P. Krishnamurthy, Harmonium by Dr. H. P. Nagendra Prasad.

Dress and Make-up by Umesh Drama Troupe. The drama is directed by Dr. H.P. Nagendra Prasad. Entry for the drama is free.

# Prize winners of Debate competition



Mysuru, Jan. 3 - As part of Founder's Day, S. Ramanathan Memorial 5th Inter-High School English and Kannada Debate Competition was organised at Sri Sharada Public School in Dattagalli recently.

The chief guest Rtn. PHF C.S. Ravi Shankar, President, Rotary West Association, inaugurated the Debate Competition. Winners of the contests are as follows:

**English Debate: 1st prize -** Gaurangadatta and Koustubh Gowda of Bharatiya Vidya Bhavan (BVB), Mysuru [Cash prize - Rs.5,000 for the institution]; **2nd prize -** Aashritha Kiran Seshan and V. Sinchana of Acharya Vidya Kula [Cash prize - Rs.3,000 for the institution]; **3rd prize -** Hardik Patel and Mahaveer Jain of Mount Litera Zee School [Cash prize - Rs.2,000 for the institution]; **English Debate Individual Prizes:** 1st prize - Gaurangadatta, BVB, Mysuru; 2nd prize - Koustubh Gowda, BVB; 3rd prize - Hardik Patel, Mount Litera Zee School, Mysuru; **English Debate Competition Rolling Trophy** - BVB, Mysuru.

**Kannada Debate: 1st prize -** Lithisha and M.K. Vinay of BVB [Cash prize - Rs.5,000 for the institution]; **2nd prize -** G. Bhavana and E.S. Divyashree of Pramati Hill View Academy [Cash prize - Rs.3,000 for the institution]; **3rd prize -** Akshari M. Bhat and Sanchitha S. Gouli of Vijaya Vittala [Cash prize - Rs.2,000 for the institution]; **Kannada Debate Individual Prizes: 1st prize -** Lithisha, BVB; 2nd prize - M.K. Vinay, BVB; **3rd prize -** G. Bhavana, Pramati; **Kannada Debate Competition Rolling Trophy:** BVB, Mysuru.

R. Manjunath Srivatsa, Secretary, Sri Sharada Public School, Dr. K. Thimmaiah, Lecturer, Maharaja's College, Dr. Somashekar, Lecturer, Demonstration School, M. Gururaja, Administrator, Ranjitha, Principal, staff and students were present.

ಮೈಸೂರು ಮಿತ್ರ

ಸೋಮವಾರ 6 ಜನವರಿ 2020

# ಮೂವರು ಸಾಧಕರು, ಎರಡು ಸಂಸ್ಥೆಗಳಿಗೆ ರಮಾಗೋವಿಂದ ಪುರಸ್ಕಾರ

ಮೈಸೂರು.ಜ.5(ಮೈಮಿಎಸ್)– ಕಲಾಮಂದಿರದಲ್ಲಿ ಭಾನುವಾರ ಸಂಜೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮೂವರು ಸಾಧಕರು ಹಾಗೂ ಎರಡು ಸಂಸ್ಥೆಗಳಿಗೆ ರಮಾಗೋವಿಂದ ಪುರಸ್ಕಾರ–2020 ನೀಡಿ, ಗೌರವಿಸಲಾಯಿತು.

ಶ್ರೀಮತಿ ಡಿ.ರಮಾಬಾಯಿ ಚಾರಿಟಬಲ್ ಫೌಂಡೇಷನ್ ಮತ್ತು ಶ್ರೀ ಎಂ.ಗೋಪಿನಾಥ ಶೆಣೈ ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ದೆಹಲಿಯ ಓಂಕಾರ್ ನಾಥ್‌ಶರ್ಮ (ಮೆಡಿಸಿನ್ ಬಾಬ), ಡಾ.ಕೆ.ಆರ್.ಕಾಮತ್, ಸಿ.ಆರ್.ಹಿಮಾಂಶು ಈ ಮೂವರು ಸಾಧಕರಿಗೆ ರಮಾಗೋವಿಂದ ಪುರಸ್ಕಾರದೊಂದಿಗೆ ತಲಾ 3 ಲಕ್ಷ ರೂ.ಚೆಕ್ ಹಾಗೂ ಹೊಳೆ ಆಲೂರು ಶಿವಾನಂದ ಕೇಲೂರ ಅವರ ಜ್ಞಾನಸಿಂಧು, ವಸತಿ ಶಾಲೆ ಮತ್ತು ಕೆರೆಮನೆ ಶಿವಾನಂದ ಹೆಗಡೆ ಅವರ ಇಡಗುಂಜಿ ಯಕ್ಷಗಾನ ಮೇಳ ಸಾಧಕ ಸಂಸ್ಥೆಗಳಿಗೆ ರಮಾಗೋವಿಂದ ಪುರಸ್ಕಾರದೊಂದಿಗೆ ತಲಾ 5 ಲಕ್ಷ ರೂ. ಚೆಕ್ ನೀಡಿ, ಸನ್ಮಾನಿಸಲಾಯಿತು.

ಸಂಗೀತ ಕಲಾವಿದ ವಿದ್ಯಾಭೂಷಣ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿ, ಹುಟ್ಟು, ಬದುಕಿನ ಮಧ್ಯೆ ನಮ್ಮ ಸ್ಥಿತಿ ಏನು, ನಾವು ಏನು ಮಾಡಬೇಕು ಎಂಬುದನ್ನು ಅರಿತು ನಡೆಯಬೇಕು. ಹೇಗೆ ಇರಬೇಕು, ಹೇಗೆ ಇರಬಾರದು ಎಂಬುದು ಬಹಳ ಮುಖ್ಯ. ಇಂದು ಯಾರಿಗೂ ಗೊತ್ತಾಗದಂತೆ ಸಮಾಜಕ್ಕೆ ಅದ್ಭುತ ಸೇವೆ ಮಾಡುತ್ತಿರುವವರನ್ನು ಗುರುತಿಸಿ, ಸನ್ಮಾನಿಸುತ್ತಿರುವುದು ಸಂತೋಷ ತಂದಿದೆ ಎಂದರು.

ಪ್ರಶಸ್ತಿಗಾಗಿ ಅರ್ಜಿ ಹಾಕದೇ, ರಾಜಕಾರಣಿಗಳ ಪ್ರಭಾವವಿಲ್ಲದೆ ಪಡೆದಿರುವ ಈ ಪ್ರಶಸ್ತಿಯು ನಿಜಕ್ಕೂ ಸಾರ್ಥಕ. ತಾವು ಮಾಡಿದ ಸಾರ್ಥಕ್ಯ ಕೆಲಸದ ಸುಗಂಧವು ಎಲ್ಲೆಡೆ ಹರಡಿ ತನ್ನ ಇರುವಿಕೆಯನ್ನು ತಿಳಿಸುತ್ತದೆ. ಅದರಂತೆ ಎಲೆಮರೆಯಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸುತ್ತಿರುವವರನ್ನು ಗುರುತಿಸಿ, ಸನ್ಮಾನಿಸಲಾಗಿದೆ ಎಂದರು.

ಕಲಿಯುಗದಲ್ಲಿ ಗಾನ ಮತ್ತು ದಾನದಿಂದ ಭಗವಂತನನ್ನು ಒಲಿಸಿಕೊಳ್ಳಬೇಕು. ಗಾನ ಎಂದರೆ ಭಗವಂತನ ಕುರಿತ ಗುಣಗಾನ ಆಗಬೇಕು. ದಾನವು ಹಸಿವು ಇರುವವರಿಗೆ, ಯೋಗ್ಯರಿಗೆ ಜ್ಞಾನಪೂರ್ವಕವಾಗಿ ನೀಡಬೇಕು. ಅದು ಜಗತ್ತಿನ ಹಿತಕ್ಕೆ ಬಳಕೆಯಾಗಬೇಕು ಎಂದು ಹೇಳಿದರು.

ಹಿಂದೆ ರಾಜರು ಸಾಧಕರನ್ನು ಗುರುತಿಸಿ ಗೌರವಿಸುತ್ತಿದ್ದರು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ರಾಜರಾಗಿರುವುದರಿಂದ ಸತ್ಪ್ರಜೆಗಳು ಸಾಧಕ ಪ್ರಜೆಗಳನ್ನು ಗುರುತಿಸಿ ಬೆನ್ನು ತಟ್ಟುವ ಕಾರ್ಯಮಾಡಬೇಕಿದೆ. ಆ ಕೆಲಸವನ್ನು ಸತ್ಪ್ರಜೆಗಳಾದ ಶೆಣೈ ಕುಟುಂಬದವರು ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಟ್ರಸ್ಟಿ ಎಂ.ಜಗನ್ನಾಥ್ ಶೆಣೈ ಮಾತನಾಡಿ, ಸಮಾಜದ ಒಳಿತಿಗಾಗಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವವರನ್ನು ಗುರುತಿಸಿ ಕಳೆದ 5 ವರ್ಷಗಳಿಂದ ರಮಾಗೋವಿಂದ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ. ಇವರುಗಳು ಇನ್ನೂ ಅನೇಕ ಯುವ ಸಾಧಕರಿಗೆ ಪ್ರೇರಣೆಯಾಗಲಿದ್ದಾರೆ. ಮೂವರು ಸಾಧಕರಿಗೆ ಪುರಸ್ಕಾರದೊಂದಿಗೆ ತಲಾ 3 ಲಕ್ಷ ರೂ. ಹಾಗೂ ಹೊಳೆ ಆಲೂರು ಶಿವಾನಂದ ಕೇಲೂರ ಅವರ ಜ್ಞಾನಸಿಂಧು ವಸತಿ ಶಾಲೆ ಮತ್ತು ಕೆರೆಮನೆ ಶಿವಾನಂದ ಹೆಗಡೆ ಅವರ ಇಡಗುಂಜಿ ಯಕ್ಷಗಾನ ಮೇಳ ಸಾಧಕ ಸಂಸ್ಥೆಗಳಿಗೆ ರಮಾಗೋವಿಂದ ಪುರಸ್ಕಾರ ದೊಂದಿಗೆ 5 ಲಕ್ಷ ರೂ. ಚೆಕ್ ನೀಡಲಾಗುತ್ತಿದೆ ಎಂದು ಹೇಳಿದರು.

ಶ್ರೀಮತಿ ಡಿ.ರಮಾಬಾಯಿ ಚಾರಿಟಬಲ್ ಫೌಂಡೇಷನ್ ಮತ್ತು ಶ್ರೀ ಎಂ.ಗೋಪಿನಾಥ ಶೆಣೈ ಚಾರಿಟಬಲ್ ಟ್ರಸ್ಟ್‌ನ ಎಂ.ರಾಮನಾಥಶೆಣೈ, ಎಂ.ಜಗನ್ನಾಥ ಶೆಣೈ, ಎಂ.ಗೋಪಿನಾಥಶೆಣೈ ಕುಟುಂಬದವರು ಉಪಸ್ಥಿತರಿದ್ದರು.

ಅಂಧಮಕ್ಕಳ ಮೈನವಿರೇಳಿಸುವ ಪ್ರದರ್ಶನ: ಹೊಳೆ ಆಲೂರಿನ ಜ್ಞಾನಸಿಂಧು, ಅಂಧಮಕ್ಕಳ ವಸತಿ ಶಾಲೆಯ ವಿದ್ಯಾರ್ಥಿಗಳು ಕಣ್ಣು ಕಾಣಿಸುವವರಿಗೇನೂ ಕಡಿಮೆ ಇಲ್ಲವೆಂಬಂತೆ ಮಲ್ಲಕಂಬ, ಯೋಗಾಸನ, ಹಗ್ಗ ಬಳಸಿ ಮೈನವಿರೇಳಿಸುವ ಸಾಹಸ ಪ್ರದರ್ಶಿಸಿ, ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿದರು.



ಮೈಸೂರು ಕಲಾಮಂದಿರದಲ್ಲಿ ಶ್ರೀಮತಿ ಡಿ.ರಮಾಬಾಯಿ ಚಾರಿಟಬಲ್ ಫೌಂಡೇಷನ್ ಮತ್ತು ಶ್ರೀ ಎಂ.ಗೋಪಿನಾಥ ಶೆಣೈ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ (ಎಡದಿಂದ ಬಲಕ್ಕೆ) ಸಿ.ಆರ್.ಹಿಮಾಂಶು, ಕೆರೆಮನೆ ಶಿವಾನಂದ ಹೆಗಡೆ, ಡಾ.ಕೆ.ಆರ್.ಕಾಮತ್, ದೆಹಲಿಯ ಓಂಕಾರ್ ನಾಥ್‌ಶರ್ಮ (ಮೆಡಿಸಿನ್ ಬಾಬ) ಹಾಗೂ ಹೊಳೆ ಆಲೂರು ಶಿವಾನಂದ ಕೇಲೂರ ಅವರ ಪರವಾಗಿ (ತಾಯಿ ತುಳಸಮ್ಮ) ಅವರಿಗೆ ರಮಾಗೋವಿಂದ ಪುರಸ್ಕಾರ ನೀಡಿ, ಗೌರವಿಸಲಾಯಿತು. ಈ ವೇಳೆ ಸಂಗೀತ ಕಲಾವಿದ ವಿದ್ಯಾಭೂಷಣ ಹಾಗೂ ಶೆಣೈ ಕುಟುಂಬದವರು ಉಪಸ್ಥಿತರಿದ್ದರು.

ಮಕ್ಕಳ ಸೇವೆಯನ್ನು ಮಾಡಬೇಕೆಂದು ಹೊಳೆ ಆಲೂರಿನಲ್ಲಿ ಅಂಧರಿಗಾಗಿ ಜ್ಞಾನಸಿಂಧು ವಸತಿ ಶಾಲೆಯನ್ನು ಆರಂಭಿಸಿದೆ. ಅಂದಿನಿಂದ ಉತ್ತಮ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಕ್ಕೆ ಹಲವು ಪ್ರಶಸ್ತಿಗಳು ಸಂಸ್ಥೆಗೆ ಲಭಿಸಿವೆ. ಒಳ್ಳೆಯ ಕಾರ್ಯ ಮಾಡಿದರೆ ಸಮಾಜವು ಗುರುತಿಸುತ್ತದೆ. ಇದಕ್ಕೆ ಇಂದು ನೀಡಿದ ಪುರಸ್ಕಾರವೇ ಸಾಕ್ಷಿಯಾಗಿದೆ. ಈ ನಗದು ಪುರಸ್ಕಾರದ ಹಣದಿಂದ ಶಾಲೆ ಕೊಠಡಿ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುವುದು.

–ಶಿವಾನಂದ ಕೇಲೂರ.

ಕಳೆದ 50 ವರ್ಷಗಳಿಂದ ಸಾಮಾನ್ಯ ವೈದ್ಯನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಯಾವುದೇ ಪುರಸ್ಕಾರದ ನಿರೀಕ್ಷೆ ಇಟ್ಟುಕೊಂಡು ಸೇವೆ ಮಾಡಲಿಲ್ಲ. ನನ್ನ ಸೇವೆಯನ್ನು ಯಾವುದೇ ಭೇದ–ಭಾವವಿಲ್ಲದೇ ಎಲ್ಲರಿಗೂ ಒಂದೇ ರೀತಿ ನೀಡಬೇಕೆಂಬುದು ನನ್ನ ಆಶಯ. ನನ್ನ ಸೇವೆಯನ್ನು ಪರಿಗಣಿಸಿ, ಸನ್ಮಾನಿಸಿದ ಟ್ರಸ್ಟ್‌ನ ಕುಟುಂಬದವರಿಗೆ ಧನ್ಯವಾದ.

–ಡಾ.ಕೆ.ಆರ್.ಕಾಮತ್

ನನ್ನ ಸಾಮಾನ್ಯ ಕೆಲಸವನ್ನು ಗುರುತಿಸಿ, ಗೌರವಿಸುವ ಮೂಲಕ ಮತ್ತಷ್ಟು ಕೆಲಸ ಮಾಡುವ ಜವಾಬ್ದಾರಿ ಹೆಚ್ಚಿಸಿದ್ದಾರೆ. ಮುಂದಿನ ದಿನಗಳಲ್ಲೂ ಸಮಾಜಮುಖಿ ಕೆಲಸ ಮಾಡಲು ತಮ್ಮೆಲ್ಲರ ಹಾರೈಕೆ ಅಗತ್ಯವಿದೆ.

–ಸಿ.ಆರ್.ಹಿಮಾಂಶು

ಯಾವ ಅಪೇಕ್ಷೆ ಇಟ್ಟುಕೊಳ್ಳದೆ ಇಡಗುಂಜಿ ಯಕ್ಷಗಾನ ಮೇಳ ಸ್ಥಾಪಿಸಲಾಯಿತು. ಅಂದಿನಿಂದ ಇಂದಿನವರೆಗೂ ಎಲ್ಲರ ಸಹಕಾರದಿಂದ ನಡೆದುಕೊಂಡು ಬಂದಿದೆ. ಇಂದು ಈ ಸಂಸ್ಥೆಗೆ ಪುರಸ್ಕಾರ ಲಭಿಸಿರುವುದು ಯಕ್ಷಗಾನ ಕಲೆಗೆ ಸಂದ ಪ್ರಶಸ್ತಿ.

–ಕೆರೆಮನೆ ಶಿವಾನಂದ ಹೆಗಡೆ.

# RamaGovinda Puraskara-2020 conferred



*The awardees — (sitting from left) Art patron C.R. Himamshu, Keremane Shivananda Hegde (Idagunji Mahaganapathi Yakshagana Mandali, Uttara Kannada); Dr. K.R. Kamath of Kamakshi Hospital, Mysuru; Omkarnath Sharma of Delhi and Tulasamma Kelur and her son Shivanand Kelur (Jnanasindhu Residential School for the Visually Challenged, Hole-Alur) — are seen with (standing from left) Kusuma Shenoi, Vasumathi Shenoy, M. Ramanath Shenoy, Dr. M. Jagannatha Shenoi, Vocalist Vidyabhushana, M. Gopinath Shenoy and Savithri Shenoy. Picture below shows a section of the audience.*



Mysuru, Jan. 6 (YDS&DM)- Three achievers and two institutions were conferred 'RamaGovinda Puraskara - 2020' at a programme jointly organised by Smt. D. Ramabai Charitable Foundation and Sri M. Gopinath Shenoy Charitable Trust, Mysuru, at Kalamandira on Hunsur Road here yesterday.

The awardees were Dr. K.R. Kamath, a 75-year old General Medical Practitioner and Administrator and Trustee of Kamakshi Hospital in city, C.R. Himamshu, 67, a renowned Music and Art patron of Mysuru and a former Syndicate Member of KSGH Gangubai Hangal Music and Performing Arts University, Omkarnath Sharma, a 79-year-old former Technician of Kailash Hospital Blood Bank in Greater Noida of Uttar Pradesh and popularly known as 'Medicine Baba' for distribution of free medicines to the needy, Jnanasindhu Residential School for the Visually Challenged, Hole-Alur, Ron taluk, Gadag district (Shivanand Kelur) and Idagunji Mahaganapathi Yakshagana Mandali based in Uttar Kannada district (Keremane Shivananda Hegde).

The award carried a cash prize of Rs.5 Lakh for Institutions and Rs.3 Lakh for individuals and a citation.

Speaking after inaugurating the programme, renowned Vocalist Vidyabhushana said that we should decide on how to lead life after realising our status in the society. Pointing out that it is important to understand how we should be and what not should be, he said that he was happy to note that Ramabai Charitable Foundation and M. Gopinath Shenoy Charitable Trust have been doing yeoman service by identifying those serving the society sans any publicity.

Noting that the award is really deserving as it is given to those who do not apply and also to those who do not bring any political influence for getting the award, Vidyabhushana said that the work of the awardees has spread fragrance in the society.

Explaining the importance of 'Gaana' and 'Daana' in this 'Kaliyuga' for invoking the Gods, he said Gaana meant singing in praise of the Lord, while Daana meant Philanthrophic deeds aimed at betterment of the world we live in. Stating that in the past the Kings used to honour achievers, he said that as subjects are the rulers in a democracy, it is the duty of the people to identify real achievers and honour them, which the Shenoy family has been doing for years.

Trustee M. Jagannath Shenoi, in his address, said that the Trust has been identifying and rewarding those who are serving the society with determination and dedication without seeking any returns, since 2016.

Hoping that the achievements of the awardees will be an inspiration for the younger generation, he said that the Trust will continue to identify those working in the backstage for the betterment of the society.

Speaking after receiving the award, Shivanand Kelur of Jnanasindhu Residential School for the Visually Challenged, Hole-Alur, said that he started the school at Hole-Alur in Ron taluk of Gadag with an objective of serving the less fortunate children. Explaining the journey of the school over the years, he said that the society will definitely recognise the good work done by an individual or an Institution and 'RamaGovinda Puraskara' is a perfect example for that. The cash Prize of Rs.5 lakh will be utilised for adding classrooms in the school.

Keremane Shivanada Hegde of Idagunji Yakshagana Mandali said, the Yakshagana Mandali was started at Idagunji in Uttara Kannada district without any expectations. Recalling the co-operation of everyone in the success of the Mandali all these years, he said that the award was in recognition of Yakshagana art.

Dr. K.R. Kamath said that he has been practising medicine for the past 50 years in the city. Asserting that he has been practising medicine without seeking or expecting an award, he said that his objective is to treat everyone without any discrimination. He thanked the Trust for honouring him in recognition of his medical service to the society.

C.R. Himamshu said that the Trust had brought him more responsibility by honouring him for his general service to the society. The award will inspire him to do much more to the society with the blessings of everyone, he added.





*The students of Jnanasindhu Residential School for the Visually Challenged, Hole-Alur, Ron taluk, Gadag district, gave a breathtaking display of Mallakamba, Yoga and Rope Walk, which earned a huge applause from the audience.*

